ಇ) ೮೭-೮೮ನೇ ಸಾಲಿನಿಂದ ಗ್ರಾಮಾಂತರ ಪ್ರೌಢಶಾಲೆಗಳನ್ನು ಆಯಾ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ವಹಿಸಿದೆ. ಆದಕಾರಣ ಇನ್ನು ಮುಂದೆ ಆಯಾ ಜಿಲ್ಲಾ ಪರಿಷತ್ತುಗಳೇ ಮಾಧ್ಯಮಿಕ ಶಾಲೆಗಳನ್ನು ಪ್ರಾರಂಭಿಸುವ ಕಾರ್ಯವನ್ನು ಮಾಡುತ್ತವೆ.

ಶ್ರೀ ಬಸವರಾಜ್ ಪಾಟೀಲ್.—ಈಗ ನಮ್ಮ ಪರಿಸ್ಥಿತಿ ಹೇಗಿದೆ ಎಂದರೆ, ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಎಂಬ ಗಾದೆಯಂತೆ, ಆಗಿ ಈಗ ಇವರು ಜಿಲ್ಲಾ ಪರಿಷತ್ತು ಎಂಬುದಾಗಿ ಇವರು ಹೇಳುತ್ತಾರೆ. ಆದರೆ ಜಿಲ್ಲಾ ಪರಿಷತ್ತಿನವರು ಯಾವುದನ್ನು ಮಾಡಬೇಕೆಂಬುದಾಗಿ ಗೊತ್ತಿಲ್ಲ. ೪-೫ ವರ್ಷಗಳಿಂದಲೂ ಈ ಸರ್ಕಾರದಲ್ಲಿ ಯಾವುದನ್ನೂ ಕೇಳಿದರೂ ಅದಕ್ಕೆ ಫಂಡ್ಸ್ ಇಲ್ಲವೇ ಇರುವುದರಿಂದ ಯಾವುದನ್ನೂ ಮಾಡಿಲ್ಲ, ಇವರು ಹೇಳಿದ ಪ್ರಕಾರ ಜಿಲ್ಲಾ ಪರಿತ್ತಿನಲ್ಲಿ ಕೇಳಿದರೆ, ಅವರು ಹೇಳುತ್ತಾರೆ, ನೀವು ಶಾಸಕರು ಇದ್ದೀರಿ, ಸರ್ಕಾರದಲ್ಲಿ ಮಾತನಾಡಿ ನಮಗೆ ಹಣಕಾಸಿನ ನೆರವನ್ನು ಕೊಡುವಂತೆ ಏರ್ಪಾಡು ಮಾಡಿ ಎಂಬುದಾಗಿ, ಇದರ ಬಗ್ಗೆ ಸವಿಸ್ತಾರವಾಗಿ ಉತ್ತರವನ್ನು ಮಾನ್ಯ ಮಂತ್ರಿಗಳು ತಿಳಿಸುವರೆ?

ಶ್ರೀ ಬಿ. ಸೋಮಶೇಖರ್.—ಈಗಾಗಲೇ ಆ ಬಗ್ಗೆ ತೀರ್ಮಾನವನ್ನು ಸಚಿವ ಸಂಪುಟ ತೆಗೆದು ಕೊಂಡಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೌಢಶಾಲೆಗಳನ್ನು ಮಂಜೂರು ಮಾಡತಕ್ಕ ಹಕ್ಕು ಜಿಲ್ಲಾ ಪರಿಷತ್ತಿಗೆ ಇದೆ ಎಂಬ ಆದೇಶವನ್ನು ಈಗಾಗಲೇ ಹೊರಡಿಸಿದ್ದೇವೆ. ಆವರ ಪ್ರಕಾರ ಜಿಲ್ಲಾ ಪರಿಷತ್ತಿನವರೇ ಪರಿಶೀಲಿಸಿ ಎಲ್ಲಿ ಪ್ರೌಢಶಾಲೆಗಳನ್ನು ಮಂಜೂರು ಮಾಡಬಹುದೆಂಬುದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳೋಣ. ಶ್ರೀಮತಿ ನಾಗರತ್ನಮ್ಮನವರೇ ತಮ್ಮ ಪ್ರಶ್ನೆಯನ್ನು ಕೇಳಿ.

ಯಗಚಿ ಯೋಜನೆಯ ಬಗ್ಗೆ

೩೪೭. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ) —ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆಯ ಯಗಚಿ ಯೋಜನೆಯಲ್ಲಿ ಮಂಳುಗಡೆಯಾಗಿರುವ ಒಟ್ಟು ಗ್ರಾಮಗಳ ಸಂಖ್ಯೆ ಎಷ್ಟು?

ಆ) ಸದರಿ ಗ್ರಾಮಗಳ ಜನತೆಯ ಪುನರ್‌ವಸತಿಗಾಗಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು? ಹಾಗೂ ಇದಕ್ಕಾಗಿ ಈವರೆಗೂ ಖರ್ಚಾಗಿರುವ ಒಟ್ಟು ಹಣವೆಷ್ಟು?

ಇ) ಯಗಚಿ ಯೋಜನೆಯ ಕಾಮಗಾರಿಯ ಪ್ರಗತಿ ಈಗ ಯಾವ ಹಂತದಲ್ಲಿದೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹನ್ನೆರಡು,

ಆ) ಪುನರ್‌ವಸತಿ ಸಮಿತಿ ರಚನೆ ಮಾಡಿರುವುದು, ಪುನರ್‌ವಸತಿಗಾಗಿ ಅಗತ್ಯವಿರುವ ಭೂಸ್ವಾಧೀನಪಡಿಸಿಕೊಳ್ಳಲು ವ್ಯವಹರಿಸಲಾಗುತ್ತಿರುವುದು, ಪುನರ್‌ವಸತಿ ಕಲ್ಪಿಸಲು ಭಾಗಶಃ ವಸಾಹತುಗಳನ್ನು ಗುರುತಿಸಲಾಗಿರುವುದು.

ಇ) ಅಣೆಕಟ್ಟಿನ ಕಾಮಗಾರಿಗಳಿಗೆ ಗುತ್ತಿಗೆದಾರರನ್ನು ನಿಗದಿಪಡಿಸಲಾಗಿದೆ. ಹಾಗೂ ಯೋಜನೆಯ ಪೂರ್ವ ಭಾವಿ ಕೆಲಸಗಳು ಪ್ರಗತಿಯಲ್ಲಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ ನನಗೆ ಪ್ರಶ್ನೆ ಕೇಳುವುದಕ್ಕೆ ನಾಚಿಕೆಯಾಗುತ್ತದೆ. ಹಿಂದೆ ಒಂದು ಪ್ರಶ್ನೆಗೆ ಉತ್ತರಿಸುವ ಸಮಯದಲ್ಲಿ ಮಾನ್ಯ ದೇವೇಗೌಡರು ಮಾತನಾಡಿ ರಿಸೋರ್ಸಸ್ ಇಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದ್ದುದನ್ನು ಕೇಳಿದ್ದೀರಾ ಎಂದು ಉತ್ತರ ಕೊಟ್ಟರು. ಆ ರೀತಿ ನನ್ನನ್ನು ಹೆದರಿಸುವುದು ಬೇಡ, ನಾನು ಅದಕ್ಕೆ ಹೆದರುವವಳಲ್ಲ. ಈ ಒಂದು ಯೋಜನೆಯ ಖರ್ಚು ಎಷ್ಟು? ೧೯೮೪-೮೫ ರಿಂದ ೮೭-೮೮ ರವರೆಗೆ ತಾವು ಬೆಳೆ ಪರಿಹಾರವನ್ನಿ ಕೊಟ್ಟಿದ್ದೀರಾ?

ಈ ವರ್ಷ ಎಷ್ಟು ಕೊಟ್ಟಿದ್ದೀರಿ? ಈ ವರ್ಷ ಕೊಟ್ಟಿಲ್ಲವೆಂದು ನನಗನ್ನಿಸುತ್ತದೆ, ತಾವು ಏನು ೩ ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೀರಿ ಅದು ಅಲ್ಲಿರುವ ಸಿಬ್ಬಂದಿ ಕ್ವಾರ್ಟರ್ಸ್‌ಗಳಿಗಾಗಿ ಆಗಿದೆ. ಇದರಿಂದ ಯೋಜನೆಗೆ ಏನೂ ಖರ್ಚು ಆಗಿಲ್ಲ. ಈ ವರ್ಷ ಈ ಬಗ್ಗೆ ಎಷ್ಟು ಖರ್ಚು ಮಾಡುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. —ಮಾನ್ಯ ಬಸವರಾಜ ಪಾಟೀಲ್ ಅವರ ಪ್ರಶ್ನೆಯೇ ಬೇರೆ. ಅದಕ್ಕೆ ಸರಿಯಾದ ಉತ್ತರ ಬಂದಿಲ್ಲ. (ಗೊಂದಲ) ಅವರಿಗೆ ಉತ್ತರದ ಪ್ರತಿಯನ್ನು ದೊರಕಿಸಿ ಕೊಟ್ಟಿಲ್ಲ, ಮಂತ್ರಿಗಳು ಉತ್ತರಪನ್ನು ಓದಿದರೇ ಹೊರತು ಅದರ ಪ್ರತಿ ಮಾನ್ಯ ಸದಸ್ಯರಿಗೆ ದೊರಕಿಲ್ಲ.

ಅಧ್ಯಕ್ಷರು.—ಮಂತ್ರಿಗಳು ಉತ್ತರವನ್ನು ಓದಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಉಪ ಪ್ರಶ್ನೆ ಕೇಳಲು ಅವರಿಗೆ ಉತ್ತರದ ಪ್ರತಿ ಬೇಡವೆ?

(ಗೊಂದಲ)

ಶ್ರೀ ಬಸವರಾಜ ಪಾಟೀಲ್.— ನಾನು ಕೇಳುವುದು, ದುಡ್ಡು ಕೊಟ್ಟಿದ್ದಾರೆಯೇ ಎಂದು.

ಅಧ್ಯಕ್ಷರು.—ಬಸವರಾಜ ಪಾಟೀಲರು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ತಾವೆಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ಬಸವರಾಜ ಪಾಟೀಲರೇ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್. ಡಿ. ದೇವೇಗೌಡ.—ಬೆಳೆ ಪರಿಹಾರವನ್ನು ಕೊಟ್ಟಿಲ್ಲವೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಈ ವರ್ಷ ನಾವು ೧೪ ಲಕ್ಷ ೩೪ ಸಾವಿರ ರೂಪಾಯಿಗಳ ಬೆಳೆ ಪರಿಹಾರವನ್ನು ಕೊಟ್ಟಿದ್ದೇವೆ, ಈಗ ತಾನೇ ನಾನು ಒಂದು ವಾರದ ಹಿಂದೆ ಜಿಲ್ಲಾ ಪ್ರವಾಸ ಹೋಗಿದ್ದ ಕಾಲದಲ್ಲಿ ಪರಿಸ್ಥಿತಿ ಗೊತ್ತಾದ ಮೇಲೆ, ಮಾನ್ಯ ಮುಖ್ಯ ಮಂತ್ರಿಯವರ ಜೊತೆ ದೂರವಾಣಿ ಮೂಲಕ ಪ್ರಸ್ತಾಪ ಮಾಡಿ ೩೬ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಪ್ರತ್ಯೇಕವಾಗಿ ಬೆಳೆ ಪರಿಹಾರ ಕೊಡುವುದಕ್ಕೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ಈ ವಾರದಲ್ಲಿ ಅದನ್ನು ಬಟವಾಡೆ ಮಾಡುತ್ತೇವೆ. ಸುಮಾರು ೧೫೭ ಲಕ್ಷ ರೂಪಾಯಿಗಳ ಪ್ರಾಜೆಕ್ಟ್‌ನ ಪ್ರಿಲಿಮ್ಸ್‌ರಿ ವರ್ಕ್ಸ್‌ಗೆ ಎಂದರೆ, ಡೈವರ್ಸನ್ ಆಫ್ ರೋಡ್ಸ್ ಇರಬಹುದು, ಕ್ವಾರ್ಟರ್ಸ್ ಇರಬಹುದು, ಫೌಂಡೇಷನ್ ಇರಬಹುದು—ಈ ಬಾಬುಗಳಿಗೆ ಇಲ್ಲಿಯವರೆಗೆ ಹಣ ಖರ್ಚು ಆಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿನ ಪದವಿ ಪೂರ್ವ ಕಾಲೇಜು ಹಾಗೂ ಪ್ರಥಮ ದರ್ಜೆ ಕಾಲೇಜುಗಳ ಬಗ್ಗೆ

೩೬೬. ಶ್ರೀ ಪಟ್ಟಮಕ್ಕಿ ರತ್ನಾಕರ್ (ತೀರ್ಥಹಳ್ಳಿ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯಲ್ಲಿನ ಪದವಿ ಪೂರ್ವ ಕಾಲೇಜುಗಳ ಹಾಗೂ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಹಾಗೂ ಇರುವ ಸ್ಥಳಗಳು ಯಾವುವು?

ಆ) ಈ ಮೇಲ್ಕಂಡ ವಿದ್ಯಾ ಸಂಸ್ಥೆಗಳಲ್ಲಿ ಖಾಲಿ ಇರುವ ಅಧ್ಯಾಪಕರ ಸಂಖ್ಯೆ ಹಾಗೂ ಬೋಧನಾ ವಿಷಯಗಳೇನು? (ಪ್ರತಿ ಕಾಲೇಜಿನ ಪ್ರತ್ಯೇಕ ವಿವರಗಳು)

ಇ) ಸದರಿ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೀವರಾಜ್ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ೨೪ ಪದವಿ ಪೂರ್ವ ಸರ್ಕಾರಿ ಕಾಲೇಜುಗಳು ಹಾಗೂ ೬ ಸರ್ಕಾರಿ ಪ್ರಥಮ ಕಾಲೇಜುಗಳು ಇವೆ. ಇವುಗಳು ಇರುವ ಸ್ಥಳಗಳ ಪಟ್ಟಿಯನ್ನು ಅನುಬಂಧ-೧ ರಲ್ಲಿ ತೋರಿಸಲಾಗಿದೆ.